ಲೋಕಧ್ವನಿ

# ಧಾರವಾಡ ಐಐಐಟಿಗೆ ಭೇಟಿ

**ಹಳಿಯಾಳ:** ಪಟ್ಟಣದ ಕೆ.ಎಲ್.ಎಸ್.ವಿ.ಡಿ. ಐ.ಟಿ. ವಿದ್ಯುನ್ಮಾನ ಹಾಗೂ ಸಂಪರ್ಕ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳು, ಇಂಡಿಯಾ ಮೊಬೈಲ್ ಕಾಂಗ್ರೆಸ್ – 2023 ರ ಉದ್ಘಾಟನಾ ಸಮಾರಂಭಕ್ಕೆ ಧಾರವಾಡದ ಐ.ಐ.ಐ.ಟಿ.ಗೆ ಭೇಟಿ ನೀಡಿದರು.

ಇಂಡಿಯಾ ಮೊಬೈಲ್ ಕಾಂಗ್ರೆಸ್ – 2023ರಲ್ಲಿ 100 5ಜಿ ಬಳಕೆಯ ಸಂದರ್ಭಗಳೆಂಬ ಪ್ರಯೋಗಾಲಯದ ಪ್ರಶಸ್ತಿಯನ್ನು ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿರವರ ಉಪಸ್ಥಿತಿಯಲ್ಲಿ ಐ . ಐ. ಐ. ಟಿ. ಧಾರವಾಡಕ್ಕೆ ಆನ್ಲೈನ್ ಮೂಲಕ ಪ್ರದಾನ ಮಾಡಲಾಯಿತು. ಈ ಪ್ರಯೋಗಾಲಯದ ವಿವಿಧ ಸೌಲಭ್ಯಗಳ ಬಗ್ಗೆ ಅರಿತುಕೊಳ್ಳುವ ಹಾಗೂ ಇದರ ಮುಖಾಂತರ ಹೊಸ ನಿಯೋಜನೆಗಳನ್ನು ಹುಟ್ಟು ಹಾಕುವ ಉದ್ದೇಶದ ಜೊತೆಗೆ ಇನ್ನೂ ಹೆಚ್ಚು ಸಂಶೋಧನಾ ಕಾರ್ಯಕ್ರಮಗಳ ರೂಪರೇಷೆ ಕುರಿತು ವಿ ಡಿ ಐ ಟಿ ಮತ್ತು ಐ ಐ ಐ ಟಿ ಪ್ರಾಧ್ಯಾಪಕರು ಚರ್ಚೆ ನಡೆಸಿದರು. ಇದರ ಜೊತೆಗೆ ವಿದ್ಯಾರ್ಥಿಗಳು ಐ.ಐ.ಐ. ಟಿ.ಯಲ್ಲಿ ಸ್ಥಾಪಿಸಿರುವ ವಿವಿಧ ವಿದ್ಯುನ್ಮಾನ ಪ್ರಯೋಗಾಲಯಗಳಿಗೆ ಭೇಟಿ ನೀಡಿ ನವೀನ ತಂತ್ರಜ್ಞಾನದ ವಿಷಯಗಳಾದ ಕೃತಕ ಬುದ್ಧಿ ವಂತಿಕೆ, ಯಂತ್ರ ಕಲಿಕೆ ಹಾಗೂ ಧ್ವನಿ ನಿಯಂತ್ರಿತ ರೋಬೋಟ್ಸ್ ಹತ್ತು ಹಲವಾರು ನಿಯೋಜನೆಗಳನ್ನು ಅರ್ಥೈಸಿ ಕೊಳ್ಳುವುದರಲ್ಲಿ ಸಫಲರಾದರು. ವಿಡಿಐಟಿ ವಿದ್ಯುನ್ಮಾನ ಹಾಗೂ ಸಂಪರ್ಕ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ರೋಹಿಣಿ ಕಲ್ಲೂರ ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಮಹೇಂದ್ರ ಮ. ದೀಕ್ಷಿತ್ ವಿದ್ಯಾರ್ಥಿಗಳೊಡನೆ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಎಂದು ಪ್ರಾಂಶುಪಾಲರಾದ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




Edition
Nov 2, 2023 Page No. 3
Powered by : eReleGo.com